ಅವನ ಮನಸ್ಸಿನಲ್ಲಿ ಕೊರೆಯುತ್ತಿದ್ದ ಸಂಧಾನದ ಕಾರ್ಯ ವಿಫಲವಾಗುವುದಕ್ಕೆ ಬಿಡಲಾರ. ಹಠಕ್ಕೆ ಬಿದ್ದ ವಿಕ್ರಮನ ಹೆಗಲಿಗೆ ಬೇತಾಳ ಜೋತು ಬಿದ್ದಂತೆ ಮತ್ತೆ ಪ್ರಯತ್ನ ಮಾಡಿದ.

ಏನೋ ಮೋಡಿಗೊಳಗಾದಂತೆ ಪ್ರತ್ಯಕ್ಷ ಮಂಜುವನ್ನು ನೋಡಿ ಹಿಂದಿನದ್ದನ್ನೆಲ್ಲಾ ಮರೆತು ಅವನನ್ನು ಮನೆಯೊಳಗೆ ಬಿಟ್ಟುಕೊಂಡಳು. ಅವನು ಅವಳ ಮನದೊಳಗೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದ. ಅವಳ ಕ್ಷಮಾಪಣೆ ಕೇಳಿ ತನ್ನಿಂದಾದ ಪ್ರಮಾದಕ್ಕೆ ಹೊಣೆ ಹೊತ್ತುಕೊಳ್ಳುವಂತೆ ಅವಳ ಸಾನಿಧ್ಯ ಬಯಸಿದ. ಅವನು ಪರಿಹಾರಾರ್ಥವಾಗಿ ನೀಡಿದ ಹಣವನ್ನು ಸುಯೋಗವೆಂಬಂತೆ ವ್ಯಯಿಸಿ ಇನ್ನೇನು ಕೈ ಖಾಲಿಯಾಯಿತೆಂದುಕೊಳ್ಳುವಷ್ಟರಲ್ಲಿ ಅವನ ಆಗಮನ ಅವಳಿಗೆ ಸಿಂಧುವೇ ಆಯಿತು. ಮೊದಲೇ ತಿಂಗಳಾತಿಂಗಳು ಇಂತಿಷ್ಟು ಕೊಡಬೇಕೆನ್ನುವ ಒಪ್ಪಂದಕ್ಕೆ ಸಹಿಹಾಕುವುದಾದರೆ ಮನೆ ಮತ್ತು ಮನದ ಬಾಗಿಲು ತೆರೆದಿರುವುದೆಂದು ಹೇಳಿ ಅವನನ್ನು ಬಂಧಿಸಿದಳು.

ಮಂಜುವಿನ ಉದ್ದೇಶ ಅವಳಿಗೆ ತಿಳಿಯಲಿಲ್ಲ. ಒಪ್ಪಂದಕ್ಕೆ ಸಹಿ ಹಾಕುವಂತೆ ತನ್ನ ಹಿಂದಿನ ಚಾಳಿಯನ್ನು ಮುಂದುವರೆಸಿದ. ಯಾವ ಕಟ್ಟುಪಾಡುಗಳಿಲ್ಲದೆ ಎಲ್ಲವೂ ನಿರಾತಂಕವಾಗಿ ನಡೆಯುತ್ತಿತ್ತು. ಇದು ಹೆಚ್ಚು ಸಮಯ ಮುಂದುವರೆಯಲಾರದೆನ್ನುವ ವಾಸನೆ ಅವಳ ಮೂಗಿಗೆ ಅಡರುತ್ತಲೇ ಅವನ ಬಳಿ ಖಚಿತಪಡಿಸಿಕೊಳ್ಳಲು ಒಮ್ಮೆ ಕೇಳಿದಳು. ಅವಳು ಆತ ತನಗೆ ಕೈ ಹಿಡಿದ ಗಂಡನಿಗಿಂತಲೂ ಮಿಗಿಲಾದವನೆಂದು ಹೇಳಿದರೆ; ಆತ ತನಗಾಗಿ ಮಗುವಿನ ತಾಯಿಯಾದಳೆನ್ನುವ ಔದಾರ್ಯವನ್ನು ಮೆಚ್ಚಿದೆನೆಂದು ಹೇಳಿ ಅವಳನ್ನು ಪುಸಲಾಯಿಸಿದ.

ಆದರೆ ಒಂದು ದಿನ ಇದ್ದಕ್ಕಿದ್ದಂತೆ ಮಂಜು ಇರುವ ಹೊತ್ತಿಗೆ ತೊಟ್ಟಿಲಲ್ಲಿ ಮಲಗಿದ್ದ ಮಗು ಕಾಣೆಯಾಗಿತ್ತು. ಅವಳು ಮಂಜುವಿನ ಜೊತೆಗೆ ಸರಸದಲ್ಲಿ ತೊಡಗಿದಾಗ ಅವಳ ಗಮನಕ್ಕೆ ಬಾರದಂತೆ ಮಗುವನ್ನು ಯಾರೋ ಕದ್ದೊಯ್ದಿರಬೇಕೆಂದು ಶಂಕಿಸಿದಳು. ಹುಚ್ಚು ಹಿಡಿದಂತೆ ಸಿಕ್ಕಾಪಟ್ಟೆ ಚೀರಾಡಿ ಕೂಗಾಡಿ ಮಗುವಿನ ಹುಡುಕಾಟಕ್ಕೆ ತೊಡಗಿದಳು. ಮಂಜುವಿನ ಮೇಲೆ ಸಂಶಯವಿದ್ದರೂ ಅವನು ಇರುವಾಗಲೇ ಮಗು ಕಾಣೆಯಾದದ್ದು ಅದಕ್ಕೆ ಆತ ಕಾರಣನಲ್ಲವೆನ್ನುವುದು ತಿಳಿದಿದ್ದರೂ ಮತ್ಯಾರು ಈ ಕೃತ್ಯ ಮಾಡುವವರು? ಎಂದೆನಿಸಿತು.

ಮಂಜು ಕೂಡ ಅವಳ ಸಹಾಯಕ್ಕೆ ನಿಂತ. ಎಲ್ಲಿ ಹುಡುಕಿದರೂ ಮಗು ಕಾಣಿಸಲಿಲ್ಲ. ಅವಳು ಮಾನಪ್ಪನನ್ನು ಹುಡುಕಿಕೊಂಡು ಹೋದಳು. ಮಾನಪ್ಪನಿಗೆ ಬೇರೆಲ್ಲಿಗೋ ವರ್ಗಾವಣೆಯಾಗಿತ್ತು. ಹೊಸ ಅಧಿಕಾರಿ ವಿಷಯ ತಿಳಿದುಕೊಂಡ. ಹುಡುಕುವ ಭರವಸೆಯನ್ನು ನೀಡಿದ. ಪುನ್ನಾರಿ ಮಾತ್ರ ಎಂದಿನಂತೆ ನಿರ್ಲಿಪ್ತನಾಗಿದ್ದ. ಅವಳು ಅತ್ತಳು, ಗೋಳಿಟ್ಟಳು. ಯಾವುದಕ್ಕೂ ಅವನ ಪ್ರತಿಸ್ಪಂದನೆ ಇರಲಿಲ್ಲ. ಹಿರಿಯ ಮಗನಾದರೂ ಅವಳ ಗೋಳು ಕಂಡು ಸಮಾಧಾನಿಸಿದ. ಪೊಲೀಸ್ ಅಧಿಕಾರಿಯ ಭರವಸೆಯನ್ನು ಗಟ್ಟಿಯಾಗಿ ನಂಬಿಕೂತಳು. ಆದರೆ ಕಾಣೆಯಾದ ಮಗು ಸಿಗಲಿಲ್ಲ, ಸಿಗಲಾರದೆನ್ನುವ ನಿರಾಶೆಯ ಛಾಯೆ ತುಂಬಿಕೊಂಡು ಅಂತರ್ಮುಖಿಯಾದಳು.

ಹೀಗಿರುತ್ತಲೇ ಮಂಜುವಿನ ಬರುವಿಕೆ ಕಡಿಮೆಯಾಗುತ್ತಾ ಬಂತು. ಅವಳು ತಲೆಕೆಡಿಸಿಕೊಳ್ಳಲಿಲ್ಲ. ಮಂಜು ಇಲ್ಲದಿದ್ದರೂ 'ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲುವುದೇ' ಎನ್ನುವಂತೆ ಮತ್ತೆ ತನ್ನ ಕಾಯಕದಲ್ಲಿ ತೊಡಗಿಕೊಂಡಳು. ಮಂಜು ಈಗ ಬರುವುದನ್ನು ಸಂಪೂರ್ಣ ನಿಲ್ಲಿಸಿದ. ಅವಳಿಗೆ ಏನನಿಸಿತೋ ಅವಳು ಮಂಜುವನ್ನು ಹುಡುಕಿಕೊಂಡು ಹೊರಟಳು. ಮಂಜು ಸಿಗಲಿಲ್ಲ. ಆದರೆ ಮಂಜುವನ್ನು ಯಾರೋ ಹಾಡುಹಗಲೇ ಕೊಚ್ಚಿ ಹಾಕಿದರೆನ್ನುವ ಸುದ್ದಿ ತಲುಪಿತು. ಅವಳು ಮೌನಿಯಾದಳು. ಇದ್ದಕ್ಕಿದ್ದಂತೆ ಅವಳ ತುಟಿಗಳಲ್ಲಿ ತೆಳು ನಗುವೊಂದು ಸುಳಿಯಿತು.

ಅವಳು ಮನೆ ಬಿಟ್ಟು ಹೊರಟಳು. ಗಂಡ ಮಾತಾಡಲಿಲ್ಲ; ಮಗನಿಗೆ ಪ್ರಶ್ನಿಸಬೇಕೆನ್ನುವ ಬುದ್ಧಿಯೂ ಇಲ್ಲವಾಯಿತು. ಅವಳು ಮನೆ ಬಿಟ್ಟು ಹೋದಳೇ...

ಬಸ್‌ಸ್ಟಾಂಡ್‌ನ ಮೂಲೆಯಲ್ಲಿದ್ದ ಗಣಪತಿಯ ಗುಡಿಯ ಎದುರು ಕುಳಿತಳು. ಅಲ್ಲಿ ಹೆಚ್ಚು ಗಿರಾಕಿಗಳು ಬರುವರೆನ್ನುವುದು ಗೊತ್ತಿತ್ತು. ಮುಖಕ್ಕೆ ಮಾಸ್ಕ್ ಧರಿಸಿ ಆ ದಾರಿಯಿಂದ ಹಾದು ಹೋಗುವವರೆನ್ನೆಲ್ಲಾ ನೋಡುತ್ತಿದ್ದಳು. ಅವಳ ಕಣ್ಣಿಗೆ ಗೋಚರಿಸಿದವನು ಅವನು... ಅವನು ಮುಂದೆ ಮುಂದೆ ನಡೆಯುತ್ತಿದ್ದ. ಇವಳು ಅವನ ಹಿಂದೆಯೇ ನಡೆಯುತ್ತಿದ್ದಳು. ಅವನು ಮುಖ್ಯರಸ್ತೆಯನ್ನು ದಾಟಿ ಗಲ್ಲಿಗಳ ಸಂದಿಗೆ ಸೇರಿಕೊಂಡ. ಇವಳು ಅದು ಹೇಗೋ ಅವನನ್ನು ಹಿಂಬಾಲಿಸಿಕೊಂಡು